2) *ಆಗಿದ್ದಲ್ಲಿ ಜಮೀನು ಆಯ್ದು ಆಗಿದೆಯೇ? ಯಾವಾಗ ಕಾಮಗಾರಿ ಕೆಲಸ ಪ್ರಾರಂಭ ಮಾಡಲಾಗುವುದು?*

ಶ್ರೀ ಅಜಯಕುಮಾರ್ ಸರ್ ನಾಯಕ್ (ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು) :

1) ಹೌದು

2) ಜಮೀನು ಆಯ್ಕೆಯಾಗಿದೆ. ಈ ಜಮೀನಿನ ಬಗ್ಗೆ ನ್ಯಾಯಾಲಯದಲ್ಲಿ ತಡೆ ಆಜ್ಞೆ ನೀಡಿರುವುದರಿಂದ ತಡೆ ಆಜ್ಞೆ ರದ್ದು ಆದ ನಂತರ ಕಾಮಗಾರಿ ಪ್ರಾರಂಭ ಮಾಡಲಾಗುವುದು.

ಅನುದಾನಿತ ಕನ್ನಡ ನರ್ಸರಿ ಶಾಲೆಗಳ ಶಿಕ್ಷಕರುಗಳಿಗೆ ಪೂರ್ತಿ ಅನುದಾನ

919 - ಶ್ರೀ ರಾಮಲಿಂಗಾ ರೆಡ್ಡಿ (ಜಯನಗರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸರ್ಕಾರದಿಂದ ಅನುದಾನ ಪಡೆಯುತ್ತಿರುವ ಕನ್ನಡ ನರ್ಸರಿ ಶಾಲೆಗಳ ಸಂಖ್ಯೆ ಎಷ್ಟು;

ಆ) ಈ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕರುಗಳ ಸಂಖ್ಯೆ ಎಷ್ಟು;

ಇ) ಈ ಶಾಲೆಗಳಲ್ಲಿ ಕೆಲಸ ಮಾಡತಕ್ಕ ಶಿಕ್ಷಕರುಗಳಿಗೆ ಸರ್ಕಾರ ನೀಡುತ್ತಿರುವ ಶೇಕಡಾವಾರು ಅನುದಾನದ ಪ್ರಮಾಣವೆಷ್ಟು;

ಈ) ಈ ಶಾಲೆಗಳಿಗೆ ಶಿಕ್ಷಕರುಗಳ ನೇಮಕಾತಿಗಳನ್ನು ನಿಲ್ಲಿಸಿರುವುದು ನಿಜವಲ್ಲವೇ?

ಉ) ಈ ಎಲ್ಲಾ ಶಾಲೆಗಳ ಶಿಕ್ಷಕರುಗಳಿಗೆ ಸರ್ಕಾರ ಪೂರ್ತಿ ಅನುದಾನ ನೀಡುವ ಪ್ರಸ್ತಾವ ಸರ್ಕಾರದ ಮುಂದೆ ಇದೆಯೇ?

ಊ) ಈ ಶಿಕ್ಷಕರುಗಳಿಗೆ ಟೈಮ್ ಬೌಂಡ್ ಇನ್‌ಕ್ರಿಮೆಂಟ್ ಹಾಗೂ ಗಳಿಕೆ ರಜಾ ಸೌಲಭ್ಯವನ್ನು ಒದಗಿಸಲು ಸರ್ಕಾರ ಆದೇಶ ನೀಡುವುದೇ?

ಶ್ರೀ ಹೆಚ್.ಜಿ. ಗೋವಿಂದಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) 370.

ಆ) 475.

ಇ) (ನಗರ).

ಹಳೇ ಮೈಸೂರು ಪ್ರದೇಶಕ್ಕೆ	ಶೇ. 50
ಗ್ರಾಮಾಂತರ ಪ್ರದೇಶಕ್ಕೆ	ಶೇ. 70
ಬಾಂಬೆ ಕರ್ನಾಟಕ ಪ್ರದೇಶಕ್ಕೆ	ಶೇ. 25

ಈ) ಹೌದು. ಇದು ಕಡ್ಡಾಯ ಪ್ರಾಥಮಿಕ ಶಿಕ್ಷಣ ಯೋಜನೆಯಡಿಯಲ್ಲಿ ಬರುವುದಿಲ್ಲ,

ಮತ್ತು 1-4-84ರಿಂದ ಹೊಸದಾಗಿ ಖಾಸಗಿ ಪೂರ್ವ. ಪ್ರಾಥಮಿಕ ಶಾಲೆಗಳನ್ನು ಪ್ರಾರಂಭ ಮಾಡಲು ಸರ್ಕಾರದ ಅನುಮತಿ ಆಗತ್ಯವಿಲ್ಲ ಹಾಗೂ 1-4-84ರಿಂದ ಪ್ರಾರಂಭಿಸಿದ ಯಾವುದೇ ಪೂರ್ವ ಪ್ರಾಥಮಿಕ ಶಾಲೆಗಳನ್ನು ಅನುದಾನಕ್ಕೆ ಒಳಪಡಿಸುತ್ತಿಲ್ಲ.

ಊ) ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಋ) ಇಲ್ಲ.

ಶಾಲಾ ಮಕ್ಕಳ ಸಮವಸ್ತ್ರದ ಬಗ್ಗೆ

925 - ಶ್ರೀ ಡಿ.ಪಿ. ಸದಾನಂದ ಗೌಡ (ಪುತ್ತೂರು) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಿ ಪ್ರಾಥಮಿಕ ಶಾಲಾ ಮಕ್ಕಳಿಗೆ ಈ ವರ್ಷ ಸಮವಸ್ತ್ರ ವಿತರಿಸಲು ತಗುಲಿದ ವೆಚ್ಚವೆಷ್ಟು?

ಆ) ಈ ಬಾರಿ ಮಕ್ಕಳಿಗೆ ಸಮವಸ್ತ್ರವನ್ನು ಕಳೆದ ವರ್ಷದಂತೆ ಹೊಲಿದು ಕೊಡುವುದರಿಂದ ಉಳಿತಾಯ ಹಣವೆಷ್ಟು?

ಇ) ಖಾಸಗಿ ಶಾಲೆಗಳಲ್ಲಿ ಕಲಿಯುತ್ತಿರುವ ಬಡಮಕ್ಕಳಿಗೂ ಸಮವಸ್ತ್ರ ವಿತರಣೆಯನ್ನು ವಿಸ್ತರಿಸುವ ಯೋಜನೆ ಇದೆಯೇ?

ಈ) ಪ್ರಾಥಮಿಕ ಶಾಲಾ ಮಕ್ಕಳಿಗೆ ಗಣಿತ ವಿಜ್ಞಾನ ಮುಂತಾದ ಪಠ್ಯಪುಸ್ತಕಗಳು ಇನ್ನೂ ವಿತರಣೆ ಆಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ ಸದರಿ ಪುಸ್ತಕಗಳನ್ನು ಯಾವಾಗ ವಿತರಣೆ ಮಾಡಲಾಗುವುದು?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ರೂ. 13.00 ಕೋಟಿಗಳು

ಆ) ಸುಮಾರು ರೂ. 3.00 ಕೋಟಿಗಳು

ಇ) ಇಲ್ಲ.

ಈ) ಇಲ್ಲ.

ಉ) ಉದ್ಭವಿಸುವುದಿಲ್ಲ.

ಪ್ರಾಥಮಿಕ ಶಾಲೆಗಳ ಪ್ರವೇಶಗಳಿಗೆ ವಿಧಿಸುತ್ತಿರುವ ವಂತಿಗೆಯ ರದ್ಧತೆ.

928 - ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?